
# ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**Center of Excellence for Farmer Producer Organization**

# ಕರುನಾಡ ಎಫ್.ಪಿ.ಒ ಸಮಾಚಾರ

ತ್ರೈಮಾಸಿಕ ಇ-ಸುದ್ದಿ ಪತ್ರಿಕೆ

ಸಂಚಿಕೆ 1 • ಜನವರಿ 2022 www.coefpo.org


## ಸಲಹಾ ಸಮಿತಿ

**ಶ್ರೀಮತಿ ವಂದಿತಾ ಶರ್ಮಾ**
ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು
ಅಭಿವೃದ್ಧಿ ಆಯುಕ್ತರು

**ಡಾ. ಕೆ. ಎಂ. ಇಂದಿರೇಶ್**
ಕುಲಪತಿಗಳು,
ತೋ.ವಿ.ವಿ, ಬಾಗಲಕೋಟೆ

**ಶ್ರೀ. ಉಮಾಶಂಕರ್ ಎಸ್. ಆರ್.**
ಪ್ರಧಾನ ಕಾರ್ಯದರ್ಶಿಗಳು,
ಕೃಷಿ ಇಲಾಖೆ

**ಶ್ರೀ. ರಾಜೇಂದರ್ ಕುಮಾರ್ ಕಟಾರಿಯ**
ಪ್ರಧಾನ ಕಾರ್ಯದರ್ಶಿಗಳು,
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**ಡಾ. ಎಂ. ಬಿ. ವೆಂಕಟೇಶ್**
ಆಯುಕ್ತರು,
ಜಲಾನಯನ ಅಭಿವೃದ್ಧಿ ಇಲಾಖೆ

**ಶ್ರೀ. ನಾಗೇಂದ್ರ ಪ್ರಸಾದ್**
ನಿರ್ದೇಶಕರು,
ತೋಟಗಾರಿಕೆ ಇಲಾಖೆ

## ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಹಾಗೂ ಉತ್ತೇಜನ ಕಾರ್ಯಕ್ರಮ

ಕರ್ನಾಟಕ ರಾಜ್ಯದಲ್ಲಿ ಶೇಕಡ 75 ರಿಂದ 80 ರಷ್ಟು ಸಣ್ಣ ಹಾಗೂ ಅತೀ ಸಣ್ಣ ರೈತರು ಕೃಷಿ ಹಾಗೂ ಸಂಬಂಧಿತ ಕ್ಷೇತ್ರಗಳಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದು, ಈ ಉತ್ಪಾದಕರು ತಮ್ಮ ಉತ್ಪನ್ನಗಳಿಗೆ ಸರಿಯಾದ ಮೌಲ್ಯವನ್ನು ಮತ್ತು ಬೆಳೆಗಳ ಪೂರ್ಣ ಪ್ರಮಾಣದ ಸಂಭಾವ್ಯ ಇಳುವರಿಯನ್ನು ಪಡೆಯುವಲ್ಲಿ ಸಂಪೂರ್ಣವಾಗಿ ಸಫಲವಾಗಿಲ್ಲ. ಭೂಹಿಡುವಳಿಗಳ ನಿರಂತರ ವಿಭಜನೆ, ಅರಿವಿನ ಕೊರತೆ, ಹೊಸ ತಂತ್ರಜ್ಞಾನಗಳ ಅಳವಡಿಕೆಗೆ ಇರುವ ಕಡಿಮೆ ಒಲವು ಮತ್ತು ಸೂಕ್ತ ನಿರ್ವಹಣಾ ಸಾಮರ್ಥ್ಯದ ಕೊರತೆ ಇತ್ಯಾದಿಗಳಿಂದ ಕಡಿಮೆ ಮಟ್ಟದ ಉತ್ಪಾದನೆಗೆ ಕಾರಣವಾಗಿದೆ. ಮುಂದುವರೆದು ಅಸಮರ್ಪಕ ಮಾರುಕಟ್ಟೆ, ಮೂಲಸೌಕರ್ಯಗಳ ಕೊರತೆ, ಮಧ್ಯವರ್ತಿಗಳ ದೀರ್ಘ ಸರಪಳಿ, ಉತ್ಪನ್ನಗಳ ಕ್ರೂಢೀಕರಣದ ಕೊರತೆಯಿಂದ ಸಣ್ಣ ಮತ್ತು ಅತೀ ಸಣ್ಣ ರೈತರ ಮಾರುಕಟ್ಟೆ ಸಾಮರ್ಥ್ಯವು ಕಡಿಮೆ ಮತ್ತು ಸೀಮಿತ ಮಾರುಕಟ್ಟೆ ಅವಕಾಶಗಳಿಂದಾಗಿ ರೈತರು ಕಡಿಮೆ ಲಾಭವನ್ನು ಪಡೆಯುವಂತಾಗಿದೆ. ಈ ಎಲ್ಲಾ ಸವಾಲುಗಳನ್ನು ಅರಿತು ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಉತ್ಪಾದಕರ ಸಂಸ್ಥೆಗಳ ರಚನೆಗೆ ಹೆಚ್ಚಿನ ಒತ್ತು ನೀಡುವ ಮೂಲಕ ರೈತರನ್ನು ಉತ್ಪಾದಕರ ಸಂಸ್ಥೆಗಳ ರಚನೆಯ ಅಡಿಯಲ್ಲಿ ಒಗ್ಗೂಡಿಸುವ ಮೂಲಕ ಉತ್ಪಾದಕರ ಸಾಮರ್ಥ್ಯವರ್ಧನೆ ಮತ್ತು ಅವರ ಮಾರುಕಟ್ಟೆ ಸಾಮರ್ಥ್ಯವನ್ನು ಬಲಪಡಿಸುವತ್ತ ಗಮನ ಹರಿಸಿದೆ. ಉತ್ಪನ್ನಗಳ ಮೌಲ್ಯ ಸರಪಳಿಯಲ್ಲಿ ಪರಿಕರಗಳನ್ನು ಚಿಲ್ಲರೆ ಬೆಲೆಯಲ್ಲಿ ಖರೀದಿಸುವ ಮತ್ತು ರೈತರು ಬೆಳೆದ ಉತ್ಪನ್ನಗಳನ್ನು ಸಗಟು ಬೆಲೆಯಲ್ಲಿ ಮಾರಾಟ ಮಾಡುವುದು ಸರ್ವೇಸಾಮನ್ಯವಾಗಿದೆ. ಈ ಒಟ್ಟಾರೆ ಪ್ರಕ್ರಿಯೆಯನ್ನು ಹಿಮ್ಮುಖಗೊಳಿಸುವ ಇನ್ನೊಂದು ಪ್ರಯತ್ನವೇ ಈ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನವಾಗಿದೆ.

ಪ್ರಾಥಮಿಕ ಉತ್ಪಾದಕರನ್ನು ಅದರದಲ್ಲಿಯೂ ಪ್ರಮುಖವಾಗಿ ಸಣ್ಣ ಹಾಗೂ ಅತೀ ಸಣ್ಣ ರೈತರನ್ನು ಸಂಘಟಿಸಿ ಉತ್ಪಾದಕರ ಸಂಸ್ಥೆಗಳ ಅಡಿಯಲ್ಲಿ ತರುವ ಪ್ರಯತ್ನವು ಒಂದು ಉದಯೋನ್ಮುಖ ಮಾರ್ಗವಾಗಿ ಹೊರಹೊಮ್ಮುತ್ತಿದ್ದು, ಇದು ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಕೈಮಗ್ಗ ಕ್ಷೇತ್ರಗಳು ಎದುರಿಸುತ್ತಿರುವ ಹಲವಾರು ಸವಾಲುಗಳನ್ನು ಅದರಲ್ಲಿಯೂ ಮುಖ್ಯವಾಗಿ ಬಂಡವಾಳ ಹೂಡಿಕೆಗೆ ಸೂಕ್ತ ಅವಕಾಶಗಳು, ತಂತ್ರಜ್ಞಾನಗಳು, ಗುಣಮಟ್ಟದ ಪರಿಕರಗಳ ದೊರಕುವಿಕೆ ಹಾಗೂ ಮಾರುಕಟ್ಟೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಹಕಾರಿಯಾಗಿದೆ. ರೈತರನ್ನು ಒಗ್ಗೂಡಿಸಿ ಸಜ್ಜುಗೊಳಿಸುವ ಮೂಲಕ ಅವರ ಸಾಮರ್ಥ್ಯವರ್ಧನೆ ಮಾಡಿ ಸಾಂಘಿಕವಾಗಿ ಅವರ ಉತ್ಪಾದನಾ ಹಾಗೂ ಮಾರುಕಟ್ಟೆ ಜಾಲಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶ ಹೊಂದಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ರೈತ ಉತ್ಪಾದಕರ ಸಂಸ್ಥೆಗಳ ನೀತಿ–2018 ಅನ್ನು ಜಾರಿಗೆ ತಂದಿದೆ. ರಾಜ್ಯದಲ್ಲಿನ ವಿವಿಧ ಅಭಿವೃದ್ಧಿ ಇಲಾಖೆಗಳು ಮತ್ತು ಅಭಿವೃದ್ಧಿ ಸಂಸ್ಥೆಗಳು ರೈತ ಉತ್ಪಾದಕರ ಸಂಸ್ಥೆಗಳ ರಚನೆಯನ್ನು ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ 2018 ರನ್ವಯ ರಚಿಸುತ್ತಿವೆ. ಕೇಂದ್ರ ಸರ್ಕಾರವೂ ಸಹ 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉತ್ತೇಜನಕ್ಕೆ ಹೊಸ ಯೋಜನೆಯನ್ನು ಜಾರಿಗೆ ತಂದಿರುತ್ತದೆ.

ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು 15ನೇ ಆಗಸ್ಟ್ 2021 ರ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಉತ್ಪಾದಕರಾದ ರೈತರು, ಮೀನುಗಾರರು, ನೇಕಾರರನ್ನು ಸಂಘಟಿಸಿ ಅವರ ಉತ್ಪಾದಕತೆಯನ್ನು ಹೆಚ್ಚಿಸಲು ಹಾಗೂ ಅವರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಸಲುವಾಗಿ 750 ಅಮೃತ ರೈತರ / ಮೀನುಗಾರರ / ನೇಕಾರರ ಉತ್ಪಾದಕರ ಸಂಸ್ಥೆಗಳನ್ನು ರಚಿಸುವುದಾಗಿ ಘೋಷಿಸಿರುತ್ತಾರೆ. ಈ

75 ಸ್ವಾತಂತ್ರ್ಯದ ಅಮೃತ ಮಹೋತ್ಸವ

ಉತ್ಪಾದಕರ ಸಂಸ್ಥೆಗಳನ್ನು ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ರೇಷ್ಮೆ, ಜವಳಿ ಮತ್ತು ಕೈಮಗ್ಗ ಇಲಾಖೆಗಳಡಿ 3 ವರ್ಷಗಳಲ್ಲಿ ರಚಿಸಲು ಕಾರ್ಯಕ್ರಮ ರೂಪಿಸಲಾಗಿರುತ್ತದೆ. ಒಟ್ಟಾರೆ ರಚಿಸಬೇಕಾಗಿರುವ 750 ರೈತ ಉತ್ಪಾದಕರ ಸಂಸ್ಥೆಗಳ ಇಲಾಖಾವಾರು ಗುರಿಯನ್ನು ಈ ಕೆಳಗೆ ನೀಡಲಾಗಿದೆ.

| ಕ್ರ. ಸಂ. | ಇಲಾಖೆ | ಗುರಿ | | | |
|---|---|---|---|---|---|
| | | 1ನೇ ವರ್ಷ | 2ನೇ ವರ್ಷ | 3ನೇ ವರ್ಷ | ಒಟ್ಟು |
| 1 | ಜಲಾನಯನ | 70 | 70 | 70 | 210 |
| 2 | ತೋಟಗಾರಿಕೆ | 60 | 60 | 60 | 180 |
| 3 | ಪಶುಸಂಗೋಪನೆ | 50 | 50 | 50 | 150 |
| 4 | ಜವಳಿ ಹಾಗೂ ಕೈಮಗ್ಗ | 30 | 30 | 30 | 90 |
| 5 | ಮೀನುಗಾರಿಕೆ | 25 | 25 | 25 | 75 |
| 6 | ರೇಷ್ಮೆ ಇಲಾಖೆ | 15 | 15 | 15 | 45 |
| | **ಒಟ್ಟು** | **250** | **250** | **250** | **750** |



ಈ 750 ಅಮೃತ ರೈತರ/ಮೀನುಗಾರರ/ನೇಕಾರರ/ರೇಷ್ಮೆ ಉತ್ಪಾದಕರ ಸಂಸ್ಥೆಗಳ ರಚನೆಯ ಹಾದಿಯಲ್ಲಿ ಇದುವರೆಗೆ ಸುಮಾರು 205 ಅಮೃತ ರೈತರ / ಮೀನುಗಾರರ / ನೇಕಾರರ ಉತ್ಪಾದಕರ ಸಂಸ್ಥೆಗಳ ನೋಂದಣಿ ಪೂರ್ಣವಾಗಿದ್ದು ಉಳಿದ ಉತ್ಪಾದಕರ ಸಂಸ್ಥೆಗಳ ರಚನೆಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಯಲ್ಲಿ ರೈತರನ್ನು / ಮೀನುಗಾರರನ್ನು / ನೇಕಾರರನ್ನು ಸಂಘಟಿಸಿ ಅವರ ಉತ್ಪಾದಕತೆಯ ಸಾಮಥ್ಯವನ್ನು ಹೆಚ್ಚಿಸುವುದಲ್ಲದೆ ಅವರ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವಲ್ಲಿ ಸಫಲವಾಗುವುದೆಂದು ಆಶೀಸಲಾಗಿದೆ.

**ಶ್ರೀಮತಿ ವಂದಿತಾ ಶರ್ಮಾ**
ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ
ಆಭಿವೃದ್ಧಿ ಆಯುಕ್ತರು

# ಅಮೃತ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆ ಹಾಗೂ ಉತ್ತೇಜನ ಕಾರ್ಯಕ್ರಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯ ಪಾತ್ರ

ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಉತ್ತೇಜನ ಹಾಗೂ ರಚನೆಗೆ ಸಂಬಂಧಿಸಿದಂತೆ ಒಂದೇ ರೀತಿಯ ಮಾರ್ಗಸೂಚಿಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಯಲ್ಲಿ ತೊಡಗಿಸಿಕೊಂಡ ಎಲ್ಲ ಅಭಿವೃದ್ಧಿ ಇಲಾಖೆಗಳು ಅನುಸರಿಸಬೇಕೆಂಬ ಉದ್ದೇಶದಿಂದ 2018 ರಲ್ಲಿ ಕರ್ನಾಟಕ ರೈತ ಉತ್ಪಾದಕರ ಸಂಸ್ಥೆಗಳ ನೀತಿ 2018 ನ್ನು ಜಾರಿಗೆ ತಂದಿದೆ. ಈ ನೀತಿಯಲ್ಲಿ ರಾಜ್ಯದ ಪ್ರತಿಯೊಂದು ಹೋಬಳಿಯಲ್ಲಿ ಕನಿಷ್ಠ ಒಂದು ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸುವ ದೂರದೃಷ್ಟಿಯನ್ನು ಹೊಂದಲಾಗಿದೆ. ರಾಜ್ಯದಲ್ಲಿ ರೈತ ಉತ್ಪಾದಕರ ಸಂಸ್ಥೆಗಳ ಸ್ಥಾಪನೆಯಲ್ಲಿ ತೊಡಗಿಸಿಕೊಂಡ ವಿವಿಧ ಇಲಾಖೆಗಳ ಜೊತೆಗೆ ಸಮನ್ವಯ ಸಾಧಿಸಲು ಹಾಗೂ ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಯುಕ್ತ ಸಮಿತಿಗೆ ಸೂಕ್ತ ಸಹಾಯ ಹಾಗೂ ಸಲಹೆ ನೀಡುವ ದೃಷ್ಟಿಯಿಂದ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ನೋಡಲ್ ಇಲಾಖೆ ಎಂದು ನೇಮಿಸಲಾಗಿದೆ. ಇದಲ್ಲದೆ ಕೇಂದ್ರ ಸರ್ಕಾರದ ಪ್ರಾಯೋಜಿತ 10,000 ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಜಲಾನಯನ ಅಭಿವೃದ್ಧಿ ಇಲಾಖೆಯನ್ನು ಅನುಷ್ಠಾನ ಸಂಸ್ಥೆಯನ್ನಾಗಿಯೂ ನೇಮಿಸಲಾಗಿದೆ. ದೇಶದಲ್ಲಿ ಈ ರೀತಿಯಾಗಿ ಅನುಷ್ಠಾನ ಸಂಸ್ಥೆಯಾಗಿ ನೇಮಿಸಲ್ಪಟ್ಟ ಪ್ರಥಮ ಸರ್ಕಾರಿ ಇಲಾಖೆ ಎಂಬ ಹೆಗ್ಗಳಿಗೆ ಕೂಡಾ ಜಲಾನಯನ ಅಭಿವೃದ್ಧಿ ಇಲಾಖೆ ಪಾತ್ರವಾಗಿದೆ.

ಇತ್ತೀಚೆಗೆ ಕರ್ನಾಟಕ ಸರ್ಕಾರವು ಹೊಸದಾಗಿ ಘೋಷಿಸಿದ 750 ಅಮೃತ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಒಟ್ಟಾರೆ ಉಸ್ತುವಾರಿ ಹಾಗೂ ಜವಾಬ್ದಾರಿಯನ್ನು ಸಹ ಜಲಾನಯನ ಅಭಿವೃದ್ಧಿ ಇಲಾಖೆಗೆ ನೀಡಲಾಗಿದೆ. ಕೃಷಿ, ತೋಟಗಾರಿಕೆ, ಮೀನುಗಾರಿಕೆ ಹಾಗೂ ಜವಳಿ ಕ್ಷೇತ್ರಗಳಲ್ಲಿ 3 ವರ್ಷಗಳ ಅವಧಿಯಲ್ಲಿ 750 ಅಮೃತ ರೈತ ಉತ್ಪಾದಕರ ಸಂಸ್ಥೆಗಳ ರಚನೆಯ ಪ್ರಕ್ರಿಯೆ ಈಗಾಗಲೆ ಪ್ರಾರಂಭವಾಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಪನ್ಮೂಲ ಸಂಸ್ಥೆಗಳ ಆಯ್ಕೆ, ಇಲಾಖಾವಾರು ಉತ್ಪಾದಕರ ಸಂಸ್ಥೆಗಳ ಹಂಚಿಕೆಯ ಪ್ರಕ್ರಿಯೆ ಪೂರ್ಣಗೊಂಡಿದೆ. ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಹಯೋಗದೊಂದಿಗೆ ರೈತ ಉತ್ಪಾದಕರ ಸಂಸ್ಥೆಗಳ ರಚನೆ, ನೊಂದಣಿ, ಸಂಬಂಧ ಜೋಡಣೆ, ಕೃಷಿ ಯಂತ್ರೋಪಕರಣಗಳ ಬಾಡಿಗೆ ಸೇವಾ ಕೇಂದ್ರಗಳ ಸ್ಥಾಪನೆ, ಅವಶ್ಯಕ ಮೂಲ ಸೌಕರ್ಯಗಳ ರಚನೆ ಹಾಗೂ ಇತ್ಯಾದಿ ವಿಚಾರಕ್ಕೆ ಸಂಬಂಧಿಸಿದಂತೆ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನ ನೀಡಲಾಗುತ್ತದೆ.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಧನಸಹಾಯದೊಂದಿಗೆ 130 ರೈತ ಉತ್ಪಾದಕರ ಸಂಸ್ಥೆಗಳನ್ನು, ಕೇಂದ್ರ ಸರ್ಕಾರದ ಯೋಜನೆ ಅಡಿಯಲ್ಲಿ 100 ರೈತ ಉತ್ಪಾದಕರ ಸಂಸ್ಥೆಗಳನ್ನು ಹಾಗೂ ಅಮೃತ ರೈತ ಉತ್ಪಾದಕರ ಯೋಜನೆಯ ಅಡಿಯಲ್ಲಿ 69 ರೈತ ಉತ್ಪಾದಕರ ಸಂಸ್ಥೆಗಳನ್ನು ಈಗಾಗಲೆ ರಚಿಸಲಾಗಿದೆ. ಜಲಾನಯನ ಅಭಿವೃದ್ಧಿ ಇಲಾಖೆಯು ಹಲವು ನವೀನ ಕಾರ್ಯಾಕ್ರಮಗಳನ್ನು ಅದರಲ್ಲಿಯೂ ಮುಖ್ಯವಾಗಿ ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ವ್ಯಾಪಾರ ಅಭಿವೃದ್ಧಿ ಮಾಡಲು ಖರೀದಿದಾರರ ಹಾಗೂ ಮಾರಾಟಗಾರರ ಸಭೆಗಳನ್ನು ಏರ್ಪಡಿಸುವುದು ಹಾಗೂ ಅವಶ್ಯಕ ತರಬೇತಿಗಳನ್ನು ಹಮ್ಮಿಕೊಳ್ಳುವ ಮೂಲಕ ರೈತ ಉತ್ಪಾದಕರ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತಿದ್ದು ತನ್ಮೂಲಕ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಿದೆ.

**– ಡಾ. ಎಂ. ಬಿ. ವೆಂಕಟೇಶ್**
ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ

# ಪ್ರಚಲಿತ ಎಫ್.ಪಿ.ಓ ಸುದ್ದಿಗಳು

## ತೆನೆ ರೈತ ಉತ್ಪಾದಕರ ಕಂಪನಿ ನಿಯಮಿತ, ರಾಮನಗರ ಜಿಲ್ಲೆ




ತೆನೆ ರೈತ ಉತ್ಪಾದಕರ ಕಂಪನಿಯು ರಾಮನಗರ ತಾಲ್ಲೂಕಿನ ಬೊಮ್ಮಾಚನಹಳ್ಳಿ ಗ್ರಾಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಐ.ಆರ್.ಡಿ.ಎಸ್. ಸಂಪನ್ಮೂಲ ಸಂಸ್ಥೆಯ ಸಹಯೋಗದಲ್ಲಿ ದಿನಾಂಕ 24.12.2020 ರಂದು ಸ್ಥಾಪನೆಯಾಗಿರುತ್ತದೆ. ಸುತ್ತಮುತ್ತಲಿನ ಗ್ರಾಮಗಳ 575 ರೈತ ಸದಸ್ಯರುಗಳನ್ನೊಳಗೊಂಡು ಕೃಷಿ ಚಟುವಟಿಕೆಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಸದರಿ ಸಂಸ್ಥೆಯು ಸೂಕ್ತ ಸಮಯದಲ್ಲಿ ಗುಣಮಟ್ಟದ ಪರಿಕರಗಳನ್ನು ಷೇರುದಾರರಿಗೆ ಒದಗಿಸುವುದರ ಜೊತೆಗೆ, ತಾವು ಬೆಳೆದ ಉತ್ಪನ್ನಗಳಿಗೆ ಮೌಲ್ಯವರ್ಧನೆ ಮಾಡಿ, ತಾವೇ ಬೆಲೆ ನಿಗದಿಪಡಿಸಿ, ಮಾರುಕಟ್ಟೆ ಸಂಬಂಧಿತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದೆ. ತೆನೆ ರೈತ ಉತ್ಪಾದಕರ ಕಂಪನಿಯು **"ತೆನೆ ನರ್ಸರಿ"** ಎಂಬ ನರ್ಸರಿಯನ್ನು ಪ್ರಾರಂಭಿಸಿದ್ದು ಉತ್ತಮ ಗುಣಮಟ್ಟದ ಸಸಿಗಳನ್ನು ಕಡಿಮೆ ದರದಲ್ಲಿ ಒದಗಿಸುತ್ತಿದೆ. ತೆನೆ ರೈತ ಉತ್ಪಾದಕರ ಕಂಪನಿಯು ರೈತರು ಬೆಳೆದ ಸಾವಯವ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಿಕೊಡುವ ಉದ್ದೇಶದೊಂದಿಗೆ ಬೆಂಗಳೂರು ಸಾವಯವ ಒಕ್ಕೂಟಕ್ಕೆ ಪ್ರತಿ ದಿನ 1,000 ಕಿ.ಗ್ರಾಂ ಸಾವಯವ ತರಕಾರಿಗಳನ್ನು ಮಾರಾಟ ಮಾಡುತ್ತಿದೆ. ರೈತರಿಗೆ ನೇರ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಪ್ರತಿ ವಾರಾಂತ್ಯದಲ್ಲಿ **"ಸಾವಯವ ಸಂತೆ"** ಎಂಬ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತಿದೆ. ದಿನಾಂಕ 15.01.2022 ರ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಾಮನಗರ ಹಾಗೂ ಬೆಂಗಳೂರಿನಲ್ಲಿ ವ್ಯಾಪಾರ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ತೆನೆ ರೈತ ಉತ್ಪಾದಕರ ಕಂಪನಿಯು ಇಲ್ಲಿಯವರೆಗೆ ಒಟ್ಟು ರೂ.30 ಲಕ್ಷದ ವರೆಗೂ ವ್ಯವಹಾರ ವಹಿವಾಟನ್ನು ನೆಡೆಸಿದ್ದು ಸುಮಾರು ರೂ. 1 ಲಕ್ಷ ಲಾಭ ಮಾಡಿರುತ್ತದೆ.



# ಪ್ರಚಲಿತ ಎಫ್.ಪಿ.ಓ ಸುದ್ದಿಗಳು

## ಹಳ್ಳಿಕಾರ್ ತತ್ವ ರೈತ ಉತ್ಪಾದಕರ ಕಂಪನಿ ನಿಯಮಿತ, ತುಮಕೂರು ಜಿಲ್ಲೆ

ಹಳ್ಳಿಕಾರ್ ತತ್ವ ರೈತ ಉತ್ಪಾದಕರ ಕಂಪನಿಯು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಕಸಬಾ ಹೋಬಳಿಯಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಸಂಪನ್ಮೂಲ ಸಂಸ್ಥೆಯಾದ ಐ.ಎಫ್.



ಹೆಚ್.ಡಿ ಸಂಸ್ಥೆಯ ಸಹಯೋಗದಲ್ಲಿ ದಿನಾಂಕ 18.08.2020 ರಂದು ಸ್ಥಾಪನೆಯಾಗಿರುತ್ತದೆ. ಸುತ್ತಮುತ್ತಲಿನ ಗ್ರಾಮಗಳ ರೈತರನ್ನು ಒಳಗೊಂಡು ಕೃಷಿ ಚಟುವಟಿಕೆಗಳಿಗೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ 500 ಷೇರು ಸದಸ್ಯರುಗಳನ್ನು ಒಳಗೊಂಡಿದ್ದು ರೈತರಿಗೆ ಸೂಕ್ತ ಸಮಯದಲ್ಲಿ ಕೃಷಿ ಪರಿಕರಗಳನ್ನು ಒದಗಿಸಿಕೊಡುತ್ತಿದೆ. ಷೇರುದಾರ ರೈತರು ಬೆಳೆದ ಕೊಬ್ಬರಿಯನ್ನು ಹಾಂಗ್‌ಕಾಂಗ್ ದೇಶಕ್ಕೆ ಕಳುಹಿಸುವ ಮೂಲಕ ರಾಜ್ಯದಲ್ಲಿಯೇ ಕೊಬ್ಬರಿಯನ್ನು ಬೇರೆ ದೇಶಕ್ಕೆ ಕಳುಹಿಸಿದ ಮೊದಲ ರೈತ ಉತ್ಪಾದಕರ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರಿಂದ ಕಂಪನಿಗೂ ಹಾಗೂ ರೈತರಿಗೂ ಲಾಭವಾಗಿದೆ. ಸದರಿ ಸಂಸ್ಥೆಯು ಒಟ್ಟು ರೂ. 30 ಲಕ್ಷ ವ್ಯಾಪಾರ ವಹಿವಾಟನ್ನು ಹೊಂದಿದ್ದು, ರೂ. 2 ಲಕ್ಷ ಲಾಭ ಗಳಿಸಿದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ವ್ಯಾಪಾರ ವಹಿವಾಟು ಮಾಡುವ ಗುರಿಯನ್ನು ಹೊಂದಿದೆ.

## ಕಾಳಿ ರೈತ ಉತ್ಪಾದಕರ ಕಂಪನಿ ನಿಯಮಿತ, ಉತ್ತರ ಕನ್ನಡ ಜಿಲ್ಲೆ

ಉತ್ತರ ಕನ್ನಡ ಜಿಲ್ಲೆಯ ಜೋಯ್ಡಾ ತಾಲ್ಲೂಕಿನಲ್ಲಿ, ಕೃಷಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ ಹಾಗೂ ಸಂಪನ್ಮೂಲ ಸಂಸ್ಥೆಯಾದ ಸ್ಕೋಡ್‌ವೇಸ್ ಸಹಯೋಗದಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ಕಾಳಿ ರೈತ ಉತ್ಪಾದಕರ ಕಂಪನಿಯು ದಿನಾಂಕ 19.07.2021 ರಂದು ರಚನೆಯಾಗಿರುತ್ತದೆ. ಈ ಸಂಸ್ಥೆಯು ಒಟ್ಟು 500 ಷೇರುದಾರರನ್ನು ಹೊಂದಿದ್ದು, ಸುತ್ತಮುತ್ತಲಿನ ಗ್ರಾಮಗಳಲ್ಲಿ ಉತ್ಪಾದನೆಯಾಗುವ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಉತ್ತೇಜನ ಮತ್ತು ಮಾರುಕಟ್ಟೆ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ರೈತ




ಉತ್ಪಾದಕರ ಕಂಪನಿ ವ್ಯಾಪ್ತಿಯಲ್ಲಿ ಆದಿವಾಸಿ ಸಮುದಾಯವಾದ ಕುಣಬಿ ಜನಾಂಗವು 50ಕ್ಕೂ ಹೆಚ್ಚು ವಿಧದ ಉತ್ತಮ ಪೋಷಕಾಂಶ ಹಾಗೂ ಔಷಧಿ ಗುಣಗಳನ್ನು ಹೊಂದಿರುವ ಗೆಡ್ಡೆ ಗೆಣಸುಗಳನ್ನು ಬೆಳೆಯುತ್ತಿದ್ದಾರೆ. ರೈತ ಉತ್ಪಾದಕರ ಕಂಪನಿಯು ಗೆಡ್ಡೆ ಗೆಣಸುಗಳಿಗೆ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದರ ಮೂಲಕ 50 ಟನ್ ಉತ್ಪಾದನೆಯಿಂದ ಮುಂದಿನ ವರ್ಷ 500 ಟನ್‌ಗೆ ಹೆಚ್ಚಿಸಲು ವಿಸ್ತರಣಾ ಯೋಜನೆಯನ್ನು ಹಮ್ಮಿಕೊಂಡಿದೆ. ಕಾಳಿ ರೈತ ಉತ್ಪಾದಕರ ಕಂಪನಿಯು ಕೇಂದ್ರ ಸರ್ಕಾರದ ವತಿಯಿಂದ 5 ಲಕ್ಷ ಇಕ್ವಿಟಿ ಗ್ರಾಂಟ್‌ನ್ನು ಪಡೆದಿದ್ದು ಈ ಕೆಳಗಿನ ಚಟುವಟಿಕೆಗಳನ್ನು ಕೈಗೊಂಡಿದೆ.

- ರಾಜ್ಯ ಮಟ್ಟದ ಗೆಡ್ಡೆ ಗೆಣಸು ಮೇಳದ ಆಯೋಜನೆ
- ಸ್ಥಳೀಯ ಆಹಾರ ಮತ್ತು ಸಂಸ್ಕೃತಿಯ ಪ್ರಚಾರ
- ಗೆಡ್ಡೆ ಗೆಣಸುಗಳ ಸಂಸ್ಕರಣೆ ಮತ್ತು ಮೌಲ್ಯವರ್ಧನೆ

## ದೊಡ್ನಳ್ಳಿ ಶಂಭುಲಿಂಗೇಶ್ವರ ರೈತ ಉತ್ಪಾದಕರ ಕಂಪನಿ ನಿಯಮಿತ, ಶಿರಸಿ ತಾಲೂಕು, ಉತ್ತರ ಕನ್ನಡ ಜಿಲ್ಲೆ

ದೊಡ್ನಳ್ಳಿ ರೈತ ಉತ್ಪಾದಕರ ಕಂಪನಿಯು ಶಿರಸಿ ತಾಲೂಕಿನ ದೊಡ್ನಳ್ಳಿ ಗ್ರಾಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಇಲಾಖೆ ಹಾಗೂ ಸಂಪನ್ಮೂಲ ಸಂಸ್ಥೆಯಾದ ಸ್ಕೋಡ್‌ವೇಸ್ ಸಂಸ್ಥೆಯ ಸಹಯೋಗದಲ್ಲಿ ದಿನಾಂಕ 18.08.2020 ರಂದು ಸ್ಥಾಪನೆಯಾಗಿರುತ್ತದೆ. ಪ್ರಸ್ತುತ 698 ಷೇರು ಸದಸ್ಯರುಗಳನ್ನು ಒಳಗೊಂಡಿದ್ದು ರೈತರಿಗೆ ಸೂಕ್ತ ಸಮಯದಲ್ಲಿ ಕೃಷಿ ಪರಿಕರಗಳನ್ನು, ಷೇರುದಾರ ರೈತರ ಉತ್ಪನ್ನಗಳಾದ ಜೋನಿಬೆಲ್ಲ ಮತ್ತು ಭತ್ತದ ಬೆಳೆಗೆ ಉತ್ತಮ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುತ್ತಿದೆ. ಭತ್ತದ ಉಪ ಉತ್ಪನ್ನವಾದ ಹುಲ್ಲನ್ನೂ ಸಹ ಉತ್ತಮ ಬೆಲೆಯಲ್ಲಿ ಖರೀದಿಸಿ, ಮಾರಾಟ ಮಾಡಿ ರೈತರಿಗೆ ಅನುಕೂಲ ಕಲ್ಪಿಸುತ್ತಿದೆ.

ದೊಡ್ನಳ್ಳಿ ರೈತ ಉತ್ಪಾದಕರ ಕಂಪನಿಯು 2020–21 ನೇ ಸಾಲಿನ ವ್ಯಾಪಾರದಲ್ಲಿ ರೂ.68,743 ಗಳಷ್ಟು ಲಾಭವನ್ನು ಗಳಿಸಿದ್ದು, ಸ್ಥಳೀಯ ಉತ್ಪನ್ನವಾದ ಜೋನಿಬೆಲ್ಲ ಹಾಗೂ ಅಕ್ಕಿಗೆ ಮೌಲ್ಯವರ್ಧನೆ ಮೂಲಕ ಮಾರುಕಟ್ಟೆಯಲ್ಲಿ **"ದೊಡ್ನಳ್ಳಿ ಕೋಣನಕಟ್ಟೆ ಜೋನಿಬೆಲ್ಲ"** ಹಾಗೂ **"ದೊಡ್ನಳ್ಳಿ ಪಾಲೀಶುರಹಿತ ಅಕ್ಕಿ"** ಎಂಬ ಹೆಸರಿನಲ್ಲಿ ಗ್ರಾಹಕರಿಗೆ ತಲುಪಿಸುತ್ತಿದೆ. ಈಗಾಗಲೆ 50 ಟನ್‌ಗೂ ಹೆಚ್ಚು ಅಕ್ಕಿಯನ್ನು ಮಾರಾಟ ಮಾಡಿದ್ದು, 2 ಟನ್ ಜೋನಿಬೆಲ್ಲವನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಿದೆ.





# ಪ್ರಚಲಿತ ಎಫ್.ಪಿ.ಒ ಸುದ್ದಿಗಳು

## ಕನಕಪುರ ರೇಷ್ಮೆ ರೈತ ಉತ್ಪಾದಕರ ಕಂಪನಿ ನಿಯಮಿತ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ

ಪ್ರಸ್ತುತ ಕನಕಪುರ ರೇಷ್ಮೆ ರೈತ ಉತ್ಪಾದಕರ ಕಂಪನಿ ನಿಯಮಿತ, ಒಟ್ಟು 550 ಸದಸ್ಯರನ್ನು ಹೊಂದಿದ್ದು ರೂ. 5.5 ಲಕ್ಷ ಷೇರು ಹಣವನ್ನು ಸಂಗ್ರಹಿಸಿದೆ. ಮಾರಾಟ ಮಳಿಗೆಯನ್ನು ಬಾಡಿಗೆಗೆ ಪಡೆದು 1.4.2021 ರಿಂದ ರೇಷ್ಮೆ ಬೆಳೆಗಾರರಿಗೆ ಅಗತ್ಯವಾಗಿ ಬೇಕಾಗಿರುವ ವಿವಿಧ ಪರಿಕರಗಳನ್ನು ಮಾರಾಟ ಮಾಡುತ್ತಾ ಬಂದಿದೆ. ಡಿಸೆಂಬರ್ 2021ರ ಮಾಹೆಯಲ್ಲಿ ಸರ್ಕಾರಿ ರೇಷ್ಮೆ



ಗೂಡು ಮಾರುಕಟ್ಟೆಯ ಆವರಣದಲ್ಲಿ ಕಂಪನಿಗೆ 40x20 ಅಡಿ ಜಾಗವನ್ನು ರೇಷ್ಮೆ ಇಲಾಖೆಯಿಂದ ಮಂಜೂರು ಮಾಡಿಸಿಕೊಂಡು, ಆ ಜಾಗದಲ್ಲಿ 20x20 ಅಡಿ ಅಳತೆಯ ಮಾರಾಟ ಮಳಿಗೆಯನ್ನು ಪ್ರಾರಂಭಿಸಲಾಗಿದೆ. ರೇಷ್ಮೆ ಬೆಳೆಗಾರರಿಗೆ ಬೇಕಾಗಿರುವ ಪರಿಕರಗಳನ್ನು ಅವರ ಊರಿನಲ್ಲಿಯೇ ದೊರಕುವಂತೆ ಮಾಡಲು ಕಂಪನಿಯ ಸದಸ್ಯ ರೈತರಿರುವ ಕೂನೂರು, ಬರಡನಹಳ್ಳಿ, ಚಿಕ್ಕಮುದುವಾಡಿ, ಬೇಕುಪ್ಪೆ ಗ್ರಾಮಗಳಲ್ಲಿ ರೈತ ಆಸಕ್ತ ಗುಂಪುಗಳ ಮುಖಾಂತರ ಒಟ್ಟು ನಾಲ್ಕು ಮಳಿಗೆಗಳನ್ನು ಪ್ರಾರಂಭಿಸಲಾಗಿದೆ ಮತ್ತು ಡಿಸೆಂಬರ್–2021 ತಿಂಗಳಿನಲ್ಲಿ 32,804/– ರೂ ವ್ಯಾಪಾರ ವಹಿವಾಟನ್ನು ನಡೆಸಿದೆ.



## ಕೃಷಿ ಕಾಯಕಯೋಗಿ ರೈತ ಉತ್ಪಾಕರ ಕಂಪನಿಯ ರೈತ ಮುಖಂಡರುಗಳಿಗೆ ತರಬೇತಿ

**ಕೃಷಿ ಕಾಯಕಯೋಗಿ ಕಂಪನಿಯ** ದಿನಾಂಕ 12.01.2022 ರಂದು ದಾವಣಗೆರೆ ಜಿಲ್ಲೆಯ ಆನಗೋಡು ಹೋಬಳಿಯ ಕುರ್ಕಿ ಗ್ರಾಮದಲ್ಲಿ ಕೃಷಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ ಮತ್ತು ಸಹರಾ ಸಂಸ್ಥೆ ದಾವಣಗೆರೆ ಇವರ ಸಹಯೋಗದಲ್ಲಿ ರೈತ ಮುಖಂಡರುಗಳಿಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಯನ್ನು ಪ್ರೊ. ಲಿಂಗಣ್ಣ, ಶಾಸಕರು, ಮಾಯಕೊಂಡ ಕ್ಷೇತ್ರ, ಇವರು ಉದ್ಘಾಟಿಸಿ ಮಾತನಾಡುತ್ತ ರೈತ ಉತ್ಪಾದಕರ ಕಂಪನಿಗಳ ರೈತರ ಉತ್ಪನ್ನಗಳನ್ನು ನೇರ ಮಾರುಕಟ್ಟೆ ಮಾಡುವಲ್ಲಿ ಉತ್ತಮ ಸಹಕಾರಿಯಾಗುವುದಲ್ಲದೆ, ಕೃಷಿ ಪರಿಕರಗಳನ್ನು ಉತ್ತಮ ಬೆಲೆಗಳಿಗೆ ನೀಡಿ ರೈತರಿಗೆ ಅನುಕೂಲ ಮಾಡುತ್ತಿವೆ. ಆದುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಷೇರು ಸದಸ್ಯತ್ವ ಹೊಂದಿ ಉತ್ತಮ ಅಭಿವೃದ್ಧಿ ಸಾಧಿಸುವಲ್ಲಿ ಪ್ರಯತ್ನಿಸಬೇಕೆಂದು ತಿಳಿಸಿದರು.

ಈ ತರಬೇತಿಯಲ್ಲಿ ಶ್ರೀ ಮಲ್ಲಿಕಾರ್ಜುನ, ವಿಜ್ಞಾನಿ, ಕೆ.ವಿ.ಕೆ., ದಾವಣಗೆರೆ ಇವರು ಡ್ರಮ್ ಸೀಡರ್, ಕೂರಿಗೆ ಬಿತ್ತನೆ ಮತ್ತು ಚೆಲ್ಲು ಭತ್ತದ ಬೆಳೆಯ ವಿಧಾನಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ ಎ.ಎಂ. ಮಾರುತೇಶ, ಕೃಷಿ ವಿಸ್ತರಣಾ ಮುಂದಾಳು, ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ, ಕತ್ತಲಗೆರೆ, ಇವರು ತೋಟಗಾರಿಕಾ ಪದ್ಧತಿಗಳ ಬಗ್ಗೆ ಹಾಗೂ ಡಾ.ಮುರಳಿ. ಆರ್., ಸಸ್ಯರೋಗ ತಜ್ಞರು, ಈ ಭಾಗದಲ್ಲಿ ಬೆಳೆಗಳಿಗೆ ಬರುವ ವಿವಿಧ ಕೀಟ ಬಾಧೆಗಳು ಮತ್ತು ಅವುಗಳ ಪರಿಹಾರ ಕುರಿತು ಉಪನ್ಯಾಸ ನೀಡಿದರು.



ತರಬೇತಿಯಲ್ಲಿ ಕಂಪನಿ ತಯಾರಿಸಿರುವ 2022 ರ ಕ್ಯಾಲೆಂಡರನ್ನು ಬಿಡುಗಡೆ ಮಾಡಲಾಯಿತು ಹಾಗೂ ಷೇರು ಸದಸ್ಯರಿಗೆ ಷೇರು ಬಾಂಡ್‌ಗಳನ್ನು ವಿತರಿಸಲಾಯಿತು. ಶ್ರೀ ರೇವಣಸಿದ್ದನಗೌಡ, ಸ.ಕೃ.ನಿ., ದಾವಣಗೆರೆ, ಶ್ರೀ ಶ್ರೀನಿವಾಸ ಕೃ.ಅ ಆನಗೋಡು ಇವರು ಕಾರ್ಯಕ್ರಮದಲ್ಲಿ ಭಾಗವಹಿಸಿ 20 ರೈತರಿಗೆ ತುಂತುರು ಹನಿ ನೀರಾವರಿ ಯೋಜನೆಯ ಪರಿಕರಗಳನ್ನು ವಿತರಣೆ ಮಾಡಿದರು. ಸಹರಾ ಸಂಸ್ಥೆಯ ಯೋಜನಾ ಸಂಯೋಜಕರಾದ ಶ್ರೀ ರಾಜೇಶರವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.



# ಸಿ.ಒ.ಇ–ಎಫ್.ಪಿ.ಒ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ಸಮುದಾಯದ ಅಭಿವೃದ್ಧಿಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿವೆ. ಇತ್ತೀಚಿನ ದಿನಗಳಲ್ಲಿ ರೈತ ಉತ್ಪಾದಕರನ್ನು ಅದರಲ್ಲೂ ಪ್ರಮುಖವಾಗಿ ಸಣ್ಣ ಮತ್ತು ಅತೀ ಸಣ್ಣ ರೈತರನ್ನು ಸಂಘಟಿಸಿ ಉತ್ಪಾದಕರ ಸಂಸ್ಥೆಗಳ ಮೂಲಕ ಅವರ ಜೀವನ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಒಂದು ಪ್ರಮುಖ ಮಾರ್ಗವಾಗಿ ಹೊರಹೊಮ್ಮುತ್ತಿದೆ. ಕರ್ನಾಟಕ ಸರ್ಕಾರ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಈ ನಿಟ್ಟಿನಲ್ಲಿ ಬುಡಕಟ್ಟು ರೈತರಿಗೆ, ರೈತ ಉತ್ಪಾದಕರ ಸಂಸ್ಥೆಗಳನ್ನು ಉತ್ತೇಜಿಸಲು ಯೋಜನೆ ಹಮ್ಮಿಕೊಂಡಿದೆ. ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕರ್ನಾಟಕ ಸರ್ಕಾರ ಮತ್ತು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ನಾಗಾಪುರ, ಶೆಟ್ಟಿಹಳ್ಳಿ, ಹೆಬ್ಬಾಳ ಹಾಗೂ ಹೆಚ್.ಡಿ. ಕೋಟೆ ತಾಲ್ಲೂಕಿನ ಬಸವನಗಿರಿ ಮತ್ತು ಮಾಸ್ತಿಗುಡಿಯಲ್ಲಿ ಪುನರ್ವಸತಿಗೊಂಡ ಒಟ್ಟು 967 ಬುಡಕಟ್ಟು ರೈತ ಕುಟುಂಬಗಳ ಸರ್ವತೋಮ್ಮುಖ ಅಭಿವೃದ್ಧಿಗಾಗಿ ಒಟ್ಟು 4 ರೈತ ಉತ್ಪಾದಕರ ಸಂಸ್ಥೆಗಳನ್ನು ರಚಿಸಿ ನೋಂದಣಿ ಮಾಡಿಸಲಾಗಿದೆ. ಬುಡಕಟ್ಟು ಜನಾಂಗವನ್ನು 1999–2000 ರಿಂದ ನಾಗರಹೊಳೆ ಅರಣ್ಯದಿಂದ ವಿವಿಧ ಹಂತಗಳಲ್ಲಿ ಪುನರ್ವಸತಿ ಮಾಡಲಾಗಿರುತ್ತದೆ. ಪುನರ್ವಸತಿ ಕಲ್ಪಿಸಲಾದ ಪ್ರತಿ ಕುಟುಂಬಕ್ಕೆ 3 ರಿಂದ 5 ಎಕರೆ ಜಮೀನು ನೀಡಲಾಗಿದೆ. ಮೇಲೆ ತಿಳಿಸಿದ 4 ಪುನರ್ವಸತಿ ಗ್ರಾಮಗಳಲ್ಲಿ ಒಟ್ಟು 3,450 ಎಕರೆ ಭೂಮಿಯನ್ನು ಕೃಷಿ ಮತ್ತು ಜೀವನೋಪಾಯಕ್ಕಾಗಿ ಒದಗಿಸಲಾಗಿದೆ. ಪುರ್ನವಸತಿಗೊಂಡ ಬುಡಕಟ್ಟು ರೈತರು ಈ ಎಫ್.ಪಿ.ಒ., ಗಳ ಸದಸ್ಯರಾಗಿರುತ್ತಾರೆ. ಈ 4 ರೈತ ಉತ್ಪಾದಕರ ಸಂಸ್ಥೆಗಳಿಗೆ ಎಲ್ಲಾ ರೀತಿಯ ಮಾರ್ಗದರ್ಶನ ಹಾಗೂ ಬೆಂಬಲ ನೀಡುವ ಸಲುವಾಗಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ಕರ್ನಾಟಕ ಸರ್ಕಾರ ಬುಡಕಟ್ಟು ಕಲ್ಯಾಣ ಇಲಾಖೆಯ ಮಧ್ಯ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವು ನಬಾರ್ಡ್ ಪ್ರಾಯೋಜಿತ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ 2021 ರ ಡಿಸೆಂಬರ್ 15 ರಿಂದ 18 ರ ಅವಧಿಯಲ್ಲಿ 2 ತಂಡಗಳಲ್ಲಿ ಲಿಂಗಸುಗೂರು, ಮಸ್ಕಿ ಹಾಗೂ ಸಿಂಧನೂರು ತಾಲ್ಲೂಕಿನ ಎಫ್.ಪಿ.ಒ ಗಳ ಪದಾಧಿಕಾರಿಗಳಿಗೆ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗಳನ್ನು ರಾಯಚೂರು ಕೃಷಿ ವಿಶ್ವವಿದ್ಯಾಲಯದ ಅಂಗ ಸಂಸ್ಥೆಯಾದ ಲಿಂಗಸುಗೂರಿನ ಕೃಷಿ ವಿಸ್ತರಣಾ ಶಿಕ್ಷಣ ಘಟಕದಲ್ಲಿ ಏರ್ಪಡಿಸಲಾಗಿತ್ತು. ಇದೇ ರೀತಿಯಾಗಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವು ದೇವದುರ್ಗ ಹಾಗೂ ರಾಯಚೂರು ತಾಲ್ಲೂಕುಗಳಲ್ಲಿರುವ ನಬಾರ್ಡ್ ಪ್ರಾಯೋಜಿತ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ 2021 ರ ಡಿಸೆಂಬರ್ 20–21 ರಂದು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗಳಲ್ಲಿ 115 ಕ್ಕೂ ಅಧಿಕ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ತರಬೇತಿಗಳಲ್ಲಿ ಪ್ರಮುಖವಾಗಿ ರೈತ ಉತ್ಪಾದಕ ಸಂಸ್ಥೆಗಳು ಅನುಸರಿಸಬೇಕಾದ ಹಣಕಾಸು ಪದ್ಧತಿಗಳು, ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ ಇರುವ ಅವಕಾಶಗಳು, ವ್ಯವಹಾರ ಯೋಜನೆಗಳು, ಕಾನೂನಾತ್ಮಕ ಅನುಸರಣೆಗಳು ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ ಲಭ್ಯವಿರುವ ವಿವಿಧ ಹಣಕಾಸು ಸಹಾಯಗಳ ಬಗ್ಗೆ ತರಬೇತಿ ನೀಡಲಾಯಿತು.

ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವು, ರಾಯಚೂರು ಹಾಗೂ ಬೀದರ್ ಜಿಲ್ಲೆಗಳಲ್ಲಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಅಡಿಯಲ್ಲಿ, ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಪ್ರಾಯೋಜಿತವಾದ ರೈತ ಉತ್ಪಾದಕರ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ 2021 ಡಿಸೆಂಬರ್ 22–23 ರಂದು 2 ತಂಡಗಳಲ್ಲಿ ಕ್ರಮವಾಗಿ ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನಲ್ಲಿ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ ಬೀದರ್‌ನಲ್ಲಿ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ತರಬೇತಿಗಳಲ್ಲಿ 68 ಕ್ಕೂ ಅಧಿಕ ಪದಾಧಿಕಾರಿಗಳು ಭಾಗವಹಿಸಿದ್ದರು. ಈ ತರಬೇತಿಗಳಲ್ಲಿ ಪ್ರಮುಖವಾಗಿ ರೈತ ಉತ್ಪಾದಕರ ಸಂಸ್ಥೆಗಳ ಆಡಳಿತ ಮತ್ತು ನಿರ್ವಹಣೆ, ಸಿ.ಇ.ಒ ಮತ್ತು ನಿರ್ದೇಶಕರುಗಳ ಜವಾಬ್ದಾರಿಗಳು ಮತ್ತು ಪಾತ್ರಗಳು, ಮೌಲ್ಯವರ್ಧನೆಗೆ ಇರುವ ಅವಕಾಶಗಳು, ವ್ಯವಹಾರ ಯೋಜನೆಗಳು, ಕಾನೂನಾತ್ಮಕ ಅನುಸರಣೆಗಳು, ರೈತ ಉತ್ಪಾದಕರ ಸಂಸ್ಥೆಗಳಿಗೆ ಲಭ್ಯವಿರುವ ವಿವಿಧ ಹಣಕಾಸು ಸಹಾಯಗಳ ಬಗ್ಗೆ ತರಬೇತಿ ನೀಡಲಾಯಿತು.






ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ನಬಾರ್ಡ್ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ. ದಿನಾಂಕ 15–16 ಡಿಸೆಂಬರ್ 2021, ಸ್ಥಳ: ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಲಿಂಗಸುಗೂರು

# ಸಿ.ಒ.ಇ–ಎಫ್.ಪಿ.ಒ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು






ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ನಬಾರ್ಡ್ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ.
ದಿನಾಂಕ 17–18 ಡಿಸೆಂಬರ್ 2021, ಸ್ಥಳ: ಕೃಷಿ ವಿಸ್ತರಣಾ ಶಿಕ್ಷಣ ಘಟಕ, ಲಿಂಗಸುಗೂರು







ರಾಯಚೂರು ಜಿಲ್ಲೆಯ ರಾಯಚೂರು ಮತ್ತು ದೇವದುರ್ಗ ತಾಲ್ಲೂಕುಗಳ ನಬಾರ್ಡ್ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ.
ದಿನಾಂಕ 20–21 ಡಿಸೆಂಬರ್ 2021, ಸ್ಥಳ: ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

# ಸಿ.ಒ.ಇ–ಎಫ್.ಪಿ.ಒ ಕೇಂದ್ರದ ಸಾಮರ್ಥ್ಯ ಬಲವರ್ಧನೆ ಚಟುವಟಿಕೆಗಳು





ರಾಯಚೂರು ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ. ದಿನಾಂಕ 22 ಡಿಸೆಂಬರ್ 2021, ಸ್ಥಳ: ಕೃಷಿ ವಿಜ್ಞಾನ ಕೇಂದ್ರ, ರಾಯಚೂರು




ಬೀದರ ಜಿಲ್ಲೆಯ ಜಲಾನಯನ ಅಭಿವೃದ್ಧಿ ಇಲಾಖೆ ಪ್ರೋತ್ಸಾಹಿತ ರೈತ ಉತ್ಪಾದಕರ ಸಂಸ್ಥೆಗಳ ಪದಾಧಿಕಾರಿಗಳಿಗೆ ತರಬೇತಿ ಮತ್ತು ಸಾಮರ್ಥ್ಯ ಬಲವರ್ಧನೆ ಕಾರ್ಯಕ್ರಮ. ದಿನಾಂಕ 23 ಡಿಸೆಂಬರ್ 2021, ಸ್ಥಳ: ತೋಟಗಾರಿಕೆ ಮಹಾವಿದ್ಯಾಲಯ, ಬೀದರ.

# ರೈತ ಉತ್ಪಾದಕರ ಸಂಸ್ಥೆಗಳು ಅನುಸರಿಸಬೇಕಾದ ಕಾನೂನು ಅನುಸರಣೆಗಳು

| ದಿನಾಂಕ | ಜನವರಿ 2022 | ಫೆಬ್ರವರಿ 2022 |
|---|---|---|
| 7 ನೇ | ಡಿಸೆಂಬರ್ ತಿಂಗಳ ಟಿ.ಡಿ.ಎಸ್. ಪಾವತಿಸುವುದು | ಜನವರಿ ತಿಂಗಳ ಟಿ.ಡಿ.ಎಸ್. ಪಾವತಿಸುವುದು |
| 10 ನೇ | ಡಿಸೆಂಬರ್ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು | ಜನವರಿ ತಿಂಗಳ ಜಿ.ಎಸ್.ಟಿ.ಆರ್–1 ನ್ನು ಪಾವತಿಸುವುದು |
| 14 ನೇ | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ) | ಟಿ.ಡಿ.ಎಸ್ ಪ್ರಮಾಣಪತ್ರ (ಫಾರ್ಮ್ 16ಬಿ, 16ಸಿ & 16ಡಿ (14 ಫೆಬ್ರವರಿ ಕೊನೆಯ ದಿನವಾಗಿರುತ್ತದೆ) |
| 15 ನೇ | ▪ ಭವಿಷ್ಯ ನಿಧಿ ಠೇವಣಿ ಮಾಡುವುದು (ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಐ ಪಾವತಿಸುವುದು (ಅನ್ವಯಿಸಿದಲ್ಲಿ ಮಾತ್ರ)<br>▪ ಟಿ.ಡಿ.ಎಸ್. ರಿಟರ್ನ್ಸ್ ಫೈಲ್ ಮಾಡುವುದು | ▪ ಭವಿಷ್ಯ ನಿಧಿ ಠೇವಣಿ ಮಾಡುವುದು (ಅನ್ವಯಿಸಿದಲ್ಲಿ ಮಾತ್ರ)<br>▪ ಇ.ಎಸ್.ಐ ಪಾವತಿಸುವುದು (ಅನ್ವಯಿಸಿದಲ್ಲಿ ಮಾತ್ರ) |
| 18 ನೇ | ಪ್ರಸ್ತುತ ಹಣಕಾಸು ವರ್ಷದ 3ನೇ ತ್ರೈಮಾಸಿಕದ (ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ) ಜಿ.ಎಸ್.ಟಿ ಸಿಎಮ್‌ಪಿ–08 ಫಾರ್ಮ್ ಭರ್ತಿ ಮಾಡುವುದು | |
| 20 ನೇ | ▪ ಡಿಸೆಂಬರ್ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು<br>▪ ಡಿಸೆಂಬರ್ ತಿಂಗಳ ಜಿ.ಎಸ್.ಟಿ.ಆರ್–3ಬಿ ಅನ್ನು ಪಾವತಿಸುವುದು | ▪ ಜನವರಿ ತಿಂಗಳ ಇನ್‌ವಾಯಿಸ್‌ಗಳಿಗೆ ಜಿ.ಎಸ್.ಟಿ ಪಾವತಿಸುವುದು.<br>▪ ಜನವರಿ ತಿಂಗಳ ಜಿ.ಎಸ್.ಟಿ.ಆರ್–3ಬಿ ನ್ನು ಪಾವತಿಸುವುದು. |
| 28 ನೇ | – | ಟಿ.ಡಿ.ಎಸ್. ಪ್ರಮಾಣಪತ್ರ |
| 30 ನೇ | ಟಿ.ಡಿ.ಎಸ್. ಪ್ರಮಾಣಪತ್ರ | |
| 31 ನೇ | ▪ ಪ್ರಸ್ತುತ ಹಣಕಾಸು ವರ್ಷದ 3ನೇ ತ್ರೈಮಾಸಿಕದ (ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ) ಫಾರ್ಮ್ ಜಿ.ಎಸ್.ಟಿ.ಆರ್–1 ನ್ನು ಭರ್ತಿ ಮಾಡುವುದು<br>▪ ಟಿ.ಡಿ.ಎಸ್. ರಿಟರ್ನ್ಸ್ ಫೈಲ್ ಮಾಡುವುದು (3ನೇ ತ್ರೈಮಾಸಿಕ)<br>▪ ಕಂಪನಿ ಕಾಯಿದೆ ಪ್ರಕಾರ ಕಾನೂನು ಅನುಸರಣೆ ಪಾಲಿಸುವುದು | – |

# ಡಿಸೆಂಬರ 2021ರ ವ್ಯಾಪಾರದ ವಹಿವಾಟನಲ್ಲಿ ಮುಂಚೂಣಿಯಲ್ಲಿರುವ 10 ರೈತ ಉತ್ಪಾದಕರ ಕಂಪನಿಗಳು

| ಕ್ರ. ಸಂ. | ಎಫ್.ಪಿ.ಒ. ಹೆಸರು | ಸ್ಥಳ | ಪ್ರೋತ್ಸಾಹಿತ ಇಲಾಖೆ | ವ್ಯಾಪಾರ ಚಟುವಟಿಕೆಗಳು | ಒಟ್ಟು ವ್ಯಾಪಾರ ವಹಿವಾಟು–2021 ಡಿಸೆಂಬರ್ ತಿಂಗಳಿನಲ್ಲಿ (ರೂ.ಲಕ್ಷಗಳಲ್ಲಿ) | | | |
|---|---|---|---|---|---|---|---|---|
| | | | | | ಪರಿಕರಗಳ ವ್ಯಾಪಾರ | ಉತ್ಪನ್ನಗಳ ವ್ಯಾಪಾರ | ಸೇವೆಗಳ ವ್ಯಾಪಾರ | ಒಟ್ಟು |
| 1 | ಆನೇಕಲ್ ತೋಟಗಾರಿಕೆ ರೈ.ಉ.ಕಂ.ನಿ.* | ಆನೇಕಲ್, ಬೆಂಗಳೂರು ನಗರ ಜಿಲ್ಲೆ | ತೋಟಗಾರಿಕೆ ಇಲಾಖೆ | ಗೊಬ್ಬರ, ಬಿತ್ತನೆಬೀಜ, ಮತ್ತು ಕೀಟನಾಶಕ ಮಾರಾಟ | 56.75 | 4.94 | 0.50 | 62.18 |
| 2 | ತೂಬುಗೆರೆ ತೋಟಗಾರಿಕೆ ರೈ.ಉ.ಕಂ.ನಿ.* | ತೂಬುಗೆರೆ, ದೊಡ್ಡಬಳ್ಳಾಪುರ ತಾ॥, ಬೆಂಗಳೂರು ಗ್ರಾಮಾಂತರ ಜಿಲ್ಲೆ | ತೋಟಗಾರಿಕೆ ಇಲಾಖೆ | ಗೊಬ್ಬರ ಮತ್ತು ತರಕಾರಿ ಮಾರಾಟ | 1.76 | 55.37 | 1.26 | 58.39 |
| 3 | ಪಿಂಗಾರ ತೋಟಗಾರಿಕೆ ರೈ.ಉ.ಕಂ.ನಿ.* | ವಿಟ್ಲಾ, ಬಂಟವಾಳ ತಾ॥, ದಕ್ಷಿಣ ಕನ್ನಡ ಜಿಲ್ಲೆ | ತೋಟಗಾರಿಕೆ ಇಲಾಖೆ | ಕೀಟನಾಶಕ, ಕೃಷಿ ಉಪಕರಣಗಳು, ಟಾರ್ಪಾಲಿನ್, ಬಾಳೆಹಣ್ಣು ಮತ್ತು ಅಡಿಕೆ ಮಾರಾಟ | 11.08 | 13.46 | 0.01 | 24.55 |
| 4 | ಸಾದಲಮ್ಮ ತೋಟಗಾರಿಕೆ ರೈ.ಉ.ಕಂ.ನಿ.* | ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ | ತೋಟಗಾರಿಕೆ ಇಲಾಖೆ | ಗೊಬ್ಬರ, ಬಿತ್ತನೆಬೀಜ ಮತ್ತು ಕೀಟನಾಶಕಗಳ ಮಾರಾಟ | 22.00 | – | 0.16 | 19.00 |
| 5 | ಭೂಪರಿವರ್ತನೆ ರೈ.ಉ.ಕಂ.ನಿ.* | ಬೆಳ್ಳಟ್ಟಿ, ಶಿರಹಟ್ಟಿ ತಾ॥, ಗದಗ ಜಿಲ್ಲೆ | ಜಲಾನಯನ ಅಭಿವೃದ್ಧಿ ಇಲಾಖೆ | ಗೊಬ್ಬರ, ಬಿತ್ತನೆಬೀಜ ಮತ್ತು ಟಾರ್ಪಾಲಿನ್ ಮಾರಾಟ | 3.00 | – | 0.16 | 19.00 |
| 6 | ಬಾಣಾವರ ರೈ.ಉ.ಕಂ.ನಿ.* | ಬಾಣಾವರ, ಅರಸಿಕೆರೆ ತಾ॥, ಹಾಸನ ಜಿಲ್ಲೆ | ಜಲಾನಯನ ಅಭಿವೃದ್ಧಿ ಇಲಾಖೆ | ಪಶುಆಹಾರ, ಕೊಬ್ಬರಿ ಮತ್ತು ಶೇಂಗಾಹಿಂಡಿ ಮಾರಾಟ | 7.28 | 1.70 | – | 8.99 |
| 7 | ಆದರ್ಶ ರೈ.ಉ.ಕಂ.ನಿ. | ಪೆರಮಾಚನಹಳ್ಳಿ, ಚಿಂತಾಮಣಿ ತಾ॥, ಚಿಕ್ಕಬಳ್ಳಾಪುರ ಜಿಲ್ಲೆ | ಜಲಾನಯನ ಅಭಿವೃದ್ಧಿ ಇಲಾಖೆ | ಪಶುಆಹಾರ ಮತ್ತು ಕೀಟನಾಶಕಗಳ ಮಾರಾಟ | 6.00 | – | – | 6.25 |
| 8 | ಅಣ್ಣಿಗೇರಿ ತಾಲ್ಲೂಕು ರೈ.ಉ.ಕಂ.ನಿ.* | ಅಣ್ಣಿಗೇರಿ, ಧಾರವಾಡ ಜಿಲ್ಲೆ | ಜಲಾನಯನ ಅಭಿವೃದ್ಧಿ ಇಲಾಖೆ | ಕುಸುಬೆಎಣ್ಣೆ ಮುಸುಕಿನಜೋಳ ಮತ್ತು ಕೃಷಿ ಉಪಕರಣಗಳ ಮಾರಾಟ | 5.08 | 0.52 | – | 5.60 |
| 9 | ಕಣಕಟ್ಟೆ ರೈ.ಉ.ಕಂ.ನಿ.* | ದೊಡ್ಡ ಮೇಟಿಕುರ್ಕೆ, ಅರಸಿಕೆರೆ ತಾ॥, ಹಾಸನ ಜಿಲ್ಲೆ | ಜಲಾನಯನ ಅಭಿವೃದ್ಧಿ ಇಲಾಖೆ | ಗೊಬ್ಬರ, ಟಾರ್ಪಾಲಿನ್ ಮತ್ತು ಕೃಷಿ ಉಪಕರಣಗಳ ಮಾರಾಟ | 3.69 | – | – | 3.69 |
| 10 | ಮಲ್ನಾಡು ತೋಟಗಾರಿಕೆ ರೈ.ಉ.ಕಂ.ನಿ.* | ಸಾಗರ, ಶಿವಮೊಗ್ಗ ಜಿಲ್ಲೆ | ತೋಟಗಾರಿಕೆ ಇಲಾಖೆ | ಗೊಬ್ಬರ ಮತ್ತು ಇತರೆ ಪರಿಕರಗಳ ಮಾರಾಟ | 2.35 | 0.10 | 0.30 | 2.76 |

* ರೈ.ಉ.ಕಂ.ನಿ.– ರೈತ ಉತ್ಪಾದಕ ಕಂಪನಿ ನಿಯಮಿತ


## ಸಂಪಾದಕೀಯ ಸಮಿತಿ

**ಪ್ರಕಾಶಕರು**

**ಡಾ. ಅಶೋಕ ಎಸ್. ಆಲೂರ,** ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಮುಖ್ಯ ಸಂಪಾದಕರು**

**ಡಾ.ಜಿ. ಬಸವರಾಜ್,** ಉಪನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಸಂಪಾದಕರು**

**ಡಾ. ಇಟಿಗಿ ಪ್ರಭಾಕರ,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಶಶಿಭೂಷಣ ಘಟ್ನಟ್ಟಿ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಶ್ರೀ. ಮಂಜುನಾಥ ಎಂ,** ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಡಾ. ಕುಮಾರ ಎಸ್,** ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

**ಸಹ ಸಂಪಾದಕರು**

**ಶ್ರೀ. ಸುಧೀರ್ ಪಿ,** ಜಂಟಿ ನಿರ್ದೇಶಕರು, ಮೀನುಗಾರಿಕೆ ಇಲಾಖೆ

**ಶ್ರೀಮತಿ. ರಶ್ಮಿ ಅಲಿಯಾಸ್,** ಉಪನಿರ್ದೇಶಕರು, ಜ.ಅ.ಇ

**ಶ್ರೀ. ತಿಮ್ಮಯ್ಯ ಎ.ಜಿ.** ಉಪನಿರ್ದೇಶಕರು, ಜ.ಅ.ಇ

**ಶ್ರೀ. ಸುರೇಶ್ ಎಫ್.ಎ,** ಮುಖ್ಯ ಪಶುವೈದ್ಯಾಧಿಕಾರಿ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

**ಶ್ರೀಮತಿ. ಕ್ಷಮಾ ಪಾಟೀಲ್,** ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ

**ಶ್ರೀಮತಿ. ಸೀಮಾ,** ಉಪನಿರ್ದೇಶಕರು, ರೇಷ್ಮೆ ಇಲಾಖೆ

**ಶ್ರೀ. ಅನಿಲ್ ಕುಮಾರ್ ರಾವತ್,** ಸಹಾಯಕ ಪ್ರಧಾನ ವ್ಯವಸ್ಥಾಪಕರು, ನಬಾರ್ಡ್


## ವಿಳಾಸ


**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ.ಆವರಣ, ಜಿ.ಕೆ.ವಿ.ಕೆ.ಅಂಚೆ, ಬೆಂಗಳೂರು–560065

ದೂರವಾಣಿ: +91–80–29721577; ಮೊಬೈಲ್: 94498 72877

ಮಿಂಚಂಚೆ: coefpo@gmail.com; ವೆಬ್‌ಸೈಟ್: www.coefpo.org